DW2

ಅಸಲ ದಾವೆ ನಂ.159/2019

ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾದೀಶರ ನ್ಯಾಯಾಲಯ
ಗೋಕಾಕ ಇವರ ನ್ಯಾಯಾಲಯದಲ್ಲಿ ಮುಕ್ಕಾಂ: ಗೋಕಾಕ.

ನಡುವೆ

1) ಶ್ರೀಮತಿ ಶಿವಲೀಲಾ ಕೋಂ. ಮುರಗೆಪ್ಪಾ ಗಾಡವಿ

. . . ವಾದಿ

ಮತ್ತು

1) ಶ್ರೀ ಶಿವಲಿಂಗಪ್ಪಾ ತಂದೆ ಬಾಳಪ್ಪಾ ಕಳ್ಳಿಗುದ್ದಿ
ಮತ್ತು ಇತರರು

. . . ಪ್ರತಿವಾದಿಯರು

NOTARY
R.S. Beerannavar
Gokak Rev. Taluka
District: Belagavi
Regd. No.Law/
LCL-213/2025
Exp.16-11-2030
GOVT. OF KARNATAKA

ಡಿ.ಡಬ್ಲ್ಯೂ–2 ಇವರ ಮುಖ್ಯ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ ಮೂಲಕ:

ಇದರಲ್ಲಿ ನಾನು ಚನಮಲ್ಲಪ್ಪ ತಂದೆ ಬಸಪ್ಪಾ ಕಳ್ಳಿಗುದ್ದಿ, ವಯಾ: 75 ವರ್ಷ, ಉದ್ಯೋಗ: ನಿವೃತ್ತಿ, ಸಾಕೀನ: ವಿವೇಕಾನಂದ ನಗರ ಗೋಕಾಕ, ತಾ: ಗೋಕಾಕ, ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:–

1) ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯ ಇರುತ್ತದೆ. ಸದರಿ ಪ್ರಕರಣದ ಸಂಪೂರ್ಣ ಮಾಹಿತಿ ಇರುವದರಿಂದ ಪ್ರತಿವಾದಿ ನಂ.1 ಇವರ ಪರವಾಗಿ ಈ ಸಾಕ್ಷಿ ಪ್ರಮಾಣ ಪತ್ರವನ್ನು ಮಾಡುತ್ತಿರುತ್ತೇನೆ.

2) ನಾನು ಮೂಲತ: ಕೊಳವಿ ಗ್ರಾಮದವನಿದ್ದು, ವಾದಿ ಇವರು ಪ್ರತಿವಾದಿ ನಂ.1 ಇವರ ಖಾಸ ಮಗಳಾಗಬೇಕು. ವಾದಿಯಾದ ಶೀವಲೀಲಾ ಇವರನ್ನು 2007 ರಲ್ಲಿ ಮೂಡಲಗಿ ತಾಲೂಕಾ ಮಸಗುಪ್ಪಿ ಗ್ರಾಮದ ಮುರಗೆಪ್ಪಾ ಗಾಡವಿ ಇವರಿಗೆ ಸಾಕಷ್ಟು ಖರ್ಚು ಮಾಡಿ ಮದುವೆ ಮಾಡಿ ಕೊಟ್ಟಿದ್ದು ಇರುತ್ತದೆ. ಸದರಿಯವರನ್ನು ಮದುವೆ ಮಾಡಿ

No. of CORRECTIONS

ಕೊಟ್ಟಾಗಿನಿಂದ ಸುಖ: ಸಂತೋಷದಿಂದ ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿರುತ್ತಾರೆ.

3) ಶಿವಲಿಂಗಪ್ಪನು ತನ್ನ ಹೆಂಡತಿ ಮಗನೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಹೀಗಿರುವಾಗ ಸನ್ 2014 ರಲ್ಲಿ ಪ್ರತಿವಾದಿ ನಂ.1 ಶಿವಲಿಂಗಪ್ಪನ ಮಗ-ಬಾಳಪ್ಪ ಮತ್ತು ಹೆಂಡತಿ ಬಸವ್ವಾ ಇವರಿರ್ವರು ರಸ್ತೆ ಅಪಘಾತದಲ್ಲಿ ತೀರಿಕೊಂಡಾಗ ಸದರಿ ಪ್ರತಿವಾದಿ ನಂ.1 ಶಿವಲಿಂಗಪ್ಪನಿಗೆ ಅಡುಗೆ ಮಾಡಿ ಕೊಟ್ಟು, ಅವರ ಊಟ ವಸತಿ ಬಗ್ಗೆ ನೋಡಿಕೊಳ್ಳುವರು ಯಾರು ಇಲ್ಲದಾಗ ಸದರಿ ಶಿವಲಿಂಗಪ್ಪನಿಗೆ ಮಹಾದೇವಿ ಎಂಬುವರನ್ನು ನಮ್ಮ ಜಾತಿ ಪದ್ಧತಿ ಪ್ರಕಾರ ಲಗ್ನಮಾಡಿದ್ದು ಇರುತ್ತದೆ. ಮಹಾದೇವಿ ಇವಳು ಪ್ರತಿವಾದಿ ನಂ.1 ಇವನ ಕೂಡ ಹೆಂಡತಿಯಾಗಿ ಕೂಡಿ ಇರುತ್ತಾರೆ ಅಂತಾ ಮಾಡಿಕೊಂಡ ವಿನಂತಿ ಸಾಕ್ಷಿ ಪ್ರಮಾಣ ಪತ್ರ.

ಈ ಮೇಲೆ ಸಾಕ್ಷಿ ಅಪ್ಪಿಡೆವಿಟದಲ್ಲಿ ಬರೆದ ಎಲ್ಲ ಮಜಕೂರು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಯಿಸಿದ್ದು, ಅದು ಸಂಪೂರ್ಣ ನಿಜ ವಿರುತ್ತದೆ.

ಗೋಕಾಕ
ದಿನಾಂಕ: 02/07/2026

ಶಪತವಿಧಿಗಾರ

"ಸದರಿಯವರ ಪರಿಚಯ ವಿದೆ"

(ಬಿ.ಎಸ್. ಕುಂಬಾರ) (B.K. ಕಲ್ಲೊಳ್ಳಿ)
ವಕೀಲರು ಗೋಕಾಕ

NOTARY * GOVT. OF KARNATAKA * R.S. Beerannavar Gokak Rev. Taluka District: Belagavi Regd. No. LCL-213/2025 Exp. 16-11-2030

Sworn to before me
R. S. BEERANNAVAR
B.Com., LL.B. (Spl.)
ADVOCATE & NOTARY, GOKAK.
2 JUL 2026

No. of CORRECTIONS 2